ರಾಜ್ಯದಲ್ಲಿರುವ ದಿನಪತ್ರಿಕೆಗಳ ಸಂಖ್ಯೆ

೮೮೮ (೧೫೨೫) ಶ್ರೀ ಹರ್ಷಕುಮಾರಗೌಡ (ಚಾಮರಾಜ).—ಪಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್‌ರಾಜ್ ಮತ್ತು ವಾರ್ತಾ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ: —

ಅ) ರಾಜ್ಯಾದ್ಯಂತ ಇರುವ ದಿನಪತ್ರಿಕೆಗಳ ಸಂಖ್ಯೆ ಎಷ್ಟು ?

ಆ) ಅವುಗಳಲ್ಲಿ ದೊಡ್ಡ ಹಾಗೂ ಸಣ್ಣ ಪತ್ರಿಕೆಗಳ ಸಂಖ್ಯೆ ಎಷ್ಟು ?

ಇ) ಸಣ್ಣ ಪತ್ರಿಕೆಗಳ ಉಳಿವಿಗಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಈ) ಸಣ್ಣ ಪತ್ರಿಕೆಗಳಿಗೆ ಪ್ರಚಾರದ ಮೂಲಕ ಇರುವ ಸಹಕಾರ ಮತ್ತು ಸವಲತ್ತುಗಳು ಎಷ್ಟು ಪತ್ರಿಕೆಗಳವರಿಗೆ ಲಭಿಸಿದೆ ?

ಉ) ಪ್ರಾರಂಭಿಕ ಹಂತದಲ್ಲಿ ಸಹಾಯಧನ ನೀಡಲಾಗುವುದಿಲ್ಲವೇ ?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ, ಪಂಚಾಯತ್‌ರಾಜ್ ಮತ್ತು ವಾರ್ತಾ ಸಚಿವರು).—

ಅ) ೬೮೨.

ಆ) ದೊಡ್ಡ ಪತ್ರಿಕೆಗಳು ೭. ಮಧ್ಯಮ ವರ್ಗದ ಪತ್ರಿಕೆಗಳು ೩. ಸಣ್ಣ ಪತ್ರಿಕೆಗಳು ೬೭೨.

ಇ) ಸಣ್ಣ ಪತ್ರಿಕೆಗಳ ಅಭಿವೃದ್ಧಿ ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರ ಶ್ರೀ ಎ೦. ಬಿ. ಸಿಂಗ್ ರವರ ಅಧ್ಯಕ್ಷತೆಯಲ್ಲಿ ಸಮಿತಿ ನೇಮಿಸಲಾಯಿತು. ಅವರು ವರದಿ ಸಲ್ಲಿಸಿದ್ದಾರೆ. ಈ ಸಮಿತಿಯ ಶಿಫಾರಸ್ಸುಗಳು ಸರ್ಕಾರದ ಪರಿಶೀಲನೆಯಲ್ಲಿವೆ. ಅರ್ಹ ಶಿಫಾರಸ್ಸುಗಳನ್ನು ಜಾರಿಗೆ ತರಲು ಪರಿಶೀಲಿಸಲಾಗುತ್ತಿದೆ.

ಈ) ಯಾವುದೇ ಕಾಲಮಿತಿಯನ್ನು ನಿಗಧಿಪಡಿಸಿಲ್ಲ.

ಉ) ಇಲ್ಲ

ಬೆಂಗಳೂರು ದೂರದರ್ಶನ ಕಾರ್ಯಕ್ರಮಗಳು

೮೯೩ (೧೪೪೬) ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು).—ಪಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಮತ್ತು ವಾರ್ತಾ ಮತ್ತು ಪ್ರಚಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಬೆಂಗಳೂರು ದೂರದರ್ಶನ ಕೇಂದ್ರದಿಂದ ಪ್ರತ್ಯಕ್ಷವಾಗುತ್ತಿರುವ ಕನ್ನಡ ಕಾರ್ಯಕ್ರಮಗಳು ರಾಜ್ಯಾದ್ಯಂತ ವೀಕ್ಷಕರಿಗೆ ನೋಡುವಂತೆ ಮಾಡಲು ಸೂಕ್ತ ಕಾರ್ಯಕ್ರಮ ಕೈಗೊಳ್ಳುವಂತೆ ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರದೊಡನೆ ವ್ಯವಹರಿಸಿ ಸೂಕ್ತ ಕಾರ್ಯಕ್ರಮ ಕೈಗೊಳ್ಳುವರೆ ?

ಆ) ಸರ್ಕಾರದವರು ಕೈಗೊಂಡಿರುವ ಪ್ರಗತಿಪರ ಕಾರ್ಯಕ್ರಮಗಳನ್ನು ಮತ್ತು ಇತರೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಬಿತ್ತರಿಸಲು ಬೇರೆ ರಾಜ್ಯಗಳಿಗೆ ಕೊಟ್ಟಿರುವಂತೆ ಎನೇ ಚಾನಲ್ ಮಂಜೂರು ಮಾಡುವ ಬಗ್ಗೆ ಕೇಂದ್ರದಿಂದ ಆದೇಶವೇನಾದರೂ ಬಂದಿದೆಯೇ ?

ಇ) ಹಾಗಿಲ್ಲದ ಪಕ್ಷದಲ್ಲಿ ಕೂಡಲೇ ಸರ್ಕಾರದವರು ಕೇಂದ್ರ ಸರ್ಕಾರದವನ್ನು ಒತ್ತಾಯ ಪಡಿಸುವರೇ ?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ, ಪಂಚಾಯತ್‌ರಾಜ್ ಮತ್ತು ವಾರ್ತಾ ಮತ್ತು ಪ್ರಚಾರ ಮಂತ್ರಿಗಳು).—

ಅ) ಹೌದು

ಆ) ಬಂದಿಲ್ಲ.

ಇ) ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಈಗಾಗಲೇ ಪತ್ರ ಬರೆಯಲಾಗಿದೆ.